ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಸಿ. ಸಿ. ಸಂಖ್ಯೆ: 2072/24**

ಪಿಡಬ್ಲ್ಯು: - 1

ದಿನಾಂಕ: 23.03.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ಆರೋಪಿ ಪರ ವಕೀಲರಾದ ಶ್ರೀ. ಪಿ. ಹೆಚ್. ಟಿ. ರವರಿಂದ:-

ಆರೋಪಿ ವಿರುದ್ಧ ಈ ದೂರನ್ನು ನೀವು ಯಾವಾಗ ದಾಖಲಿಸಿದ್ದೀರಿ ಎಂದರೆ ಸಾಕ್ಷಿಯು ಸುಮಾರು 2 ವರ್ಷಗಳ ಹಿಂದೆ ನಾನು ಈ ಪ್ರಕರಣ ದಾಖಲಿಸಿರುತ್ತೇನೆ. ಫಿರ್ಯಾದಿನಲ್ಲಿ ಇರುವ ಸಹಿ ನನ್ನದೆ ಎಂದರೆ ಸರಿ. ನಿಡಿ-1 ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು ಎಂದರೆ ಸರಿ. ದಿ: 04.12.2022 ರಂದು ಗಿರೀಶ್ ನನ್ನು ನಮ್ಮ ಮನೆಗೆ ಕರೆಸಿಕೊಂಡು ರೂ.5 ಲಕ್ಷ ಹಣ ನೀಡಿದ್ದೇನೆ ಎಂದು ನಿಡಿ-1 ರಲ್ಲಿ ಬರೆದಿದ್ದೇನೆ ಎಂದರೆ ಸರಿ. ದಿ: 23.02.2023ರಂದು ಮಡಿಕೇರಿಯ ಕೆನರಾ ಬ್ಯಾಂಕಿನಿಂದ ಗಿರೀಶ್ ರವರ ಕೆನರಾ ಬ್ಯಾಂಕ್ ಖಾತೆ ಸಂಖ್ಯೆ 17392610016118 ಗೆ ರೂ.2 ಲಕ್ಷ ಹಣವನ್ನು ಜಮಾ ಮಾಡಿರುತ್ತೇನೆ ಎಂದು ನಿಡಿ-1 ರಲ್ಲಿ ಬರೆದಿದ್ದೇನೆ ಎಂದರೆ ಸರಿ. ದಿ: 04.03.2023 ರಂದು ನಾನು ಕೈ ಸಾಲ ಮಾಡಿದ ರೂ.3,95,000/- ಹಾಗೂ ನನ್ನ ಚಿನ್ನಾಭರಣಗಳನ್ನು ಮಾರಿ ಬಂದ ರೂ.3,60,000/- ಒಟ್ಟು ರೂ.7,55,000/- ಹಣವನ್ನು ಗಿರೀಶನಿಗೆ ನಮ್ಮ ಮನೆಯಲ್ಲಿ ಕೊಟ್ಟಿರುತ್ತೇನೆ ಎಂದು ನಿಡಿ-1 ರಲ್ಲಿ ನಾನು ಬರೆದಿದ್ದೇನೆ ಎಂದರೆ ಸರಿ. ದಿ:17.08.2023ರಂದು ಮಡಿಕೇರಿಯ ಕೆನರಾ ಬ್ಯಾಂಕಿನಿಂದ ಗಿರೀಶ್ ರವರ ಕೆನರಾ ಬ್ಯಾಂಕ್ ಖಾತೆ ಸಂಖ್ಯೆ 17392610016118 ಗೆ ರೂ.72,000/- ಲಕ್ಷ ಹಣವನ್ನು ಜಮಾ ಮಾಡಿರುತ್ತೇನೆ ಎಂದು ನಿಡಿ-1ರಲ್ಲಿ ಬರೆದಿದ್ದೇನೆ ಎಂದರೆ ಸರಿ. ನನ್ನ ಮಕ್ಕಳಾದ ಅಮೃತ ಹಾಗೂ ಗೌತಮಿರವರುಗಳು ದಿ: 29.09.2022 ರಿಂದ 07.09.2023 ರ ಮಧ್ಯೆ ತಮ್ಮ ಫೋನ್ ಗಳಿಂದ ಗೂಗಲ್ ಪೇ ಮುಖಾಂತರ ರೂ.2,73,000/- ಹಣವನ್ನು ಗಿರೀಶನ ಗೂಗಲ್ ಪೇ ಸಂಖ್ಯೆ 7353736344 ಗೆ ವರ್ಗಾಯಿಸಿರುತ್ತಾರೆ ಎಂದರೆ ಸರಿ. ಒಟ್ಟು ಗಿರೀಶನಿಗೆ ನಾನು ರೂ.18 ಲಕ್ಷ ಹಣವನ್ನು ನೀಡಿರುವುದಾಗಿ ನಿಡಿ-1 ರಲ್ಲಿ ಬರೆಸಿದ್ದೇನೆ ಎಂದರೆ ಸರಿ. ದಿ: 27.02.2024 ರಂದು ನಾನು ನಿಡಿ-1 ರಂತೆ ಪೊಲೀಸರಿಗೆ ದೂರು ನೀಡಿದ್ದೇನೆ ಎಂದರೆ ಸರಿ. ನಿಮಗೆ ಗಿರೀಶ್ ರವರು ಒಟ್ಟು

ಎಷ್ಟು ಚೆಕ್ ಗಳನ್ನು ನೀಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಗಿರೀಶ್ ಚೆಕ್ ಕೊಟ್ಟಿಲ್ಲ, ನಾನು ನಿಡಿ-1 ದೂರು ದಾಖಲಿಸಿದಾಗ ಪೊಲೀಸರು ಗಿರೀಶ್ ಮತ್ತು ಜಗದೀಶ್ ರನ್ನು ಕರೆದುಕೊಂಡು ಬಂದಿದ್ದರು, ಆಗ ನಮ್ಮ ಸಮಕ್ಷಮ ಮಾತನಾಡಿದಾಗ ಜಗದೀಶ ತಾನು ರೂ.18 ಲಕ್ಷ ಹಣವನ್ನು ಗಿರೀಶ್ ನಿಂದ ಪಡೆದುಕೊಂಡಿದ್ದಾಗಿ ಹೇಳಿ ನಮಗೆ ರೂ.14 ಲಕ್ಷಕ್ಕೆ ಚೆಕ್ಕನ್ನು ಕೊಟ್ಟು ಇನ್ನುಳಿದ ರೂ.4 ಲಕ್ಷ ಹಣವನ್ನು ಗಿರೀಶ್ ನಿಂದ ಪಡೆದುಕೊಳ್ಳಿ ಎಂದು ಜಗದೀಶ್ ಹೇಳಿದ. ದಿಃ 30.03.2024 ರಂದು ನಾನು ಫಿರ್ಯಾದಿನಲ್ಲಿ ಹೇಳಿರುವ 5 ಚೆಕ್ಕುಗಳನ್ನು ಜಗದೀಶನೇ ಬರೆದು ಸಹಿ ಮಾಡಿ ನನಗೆ ಕೊಟ್ಟಿರುತ್ತಾರೆ. ನಾನು ರೂ.18 ಲಕ್ಷ ಹಣವನ್ನು ಗಿರೀಶನ ಖಾತೆಗೆ ಮತ್ತು ಗಿರೀಶನಿಗೆ ನೀಡಿರುತ್ತೇನೆ, ಜಗದೀಶನಿಗೆ ಕೊಟ್ಟಿಲ್ಲ, ಜಗದೀಶ ಗಿರೀಶನಿಂದ ಸದರಿ ರೂ.18 ಲಕ್ಷ ಹಣವನ್ನು ಪಡೆದುಕೊಂಡಿರುತ್ತಾನೆ ಎಂದು ಜಗದೀಶನೇ ಒಪ್ಪಿಕೊಂಡಿರುತ್ತಾನೆ. ನಾನು ಒಟ್ಟು 5 ಪ್ರಕರಣಗಳನ್ನು ರೂ.14 ಲಕ್ಷಕ್ಕೆ ಹಾಕಿರುತ್ತೇನೆ. ಆರೋಪಿಗೂ ನನಗೂ ಯಾವುದೇ ಸಂಬಂಧ ಇಲ್ಲ, ಆರೋಪಿ ಹಾಗೂ ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ನನಗೆ ರೂ.18 ಲಕ್ಷ ಹಣ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನನ್ನ ವಾರ್ಷಿಕ ಆದಾಯ ಎಷ್ಟು ಇದೆ ಎಂದು ಹೇಳಲು ನಾನು ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ನನ್ನ ಗಂಡ ಪೌರ ಕಾರ್ಮಿಕರಾಗಿ ಕೆಲಸ ಮಾಡುವ ಬಾಪ್ತು ನಾನು ಅವರ ಸ್ಯಾಲರಿ ಸ್ಲಿಪ್ಪನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಬೇಕಾದರೆ ಹಾಜರು ಪಡಿಸುತ್ತೇನೆ ಎನ್ನುತ್ತಾರೆ. ನಾನು ನನ್ನ ಖಾತೆಯಿಂದಾಗಲಿ, ನನ್ನ ಮಕ್ಕಳ ಖಾತೆಯಿಂದಾಗಲಿ ಆರೋಪಿಯ ಖಾತೆಗೆ ಯಾವುದೇ ಹಣ ಜಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಚಿನ್ನಾಭರಣಗಳನ್ನು ಒತ್ತೆ ಇಟ್ಟು ಗಿರೀಶನಿಗೆ ಹಣ ನೀಡಿದ ಬಾಪ್ತು ದಾಖಲೆಯನ್ನು ಈಗಾಗಲೇ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. 2024 ಕ್ಕೂ ಹಿಂದೆ ನನಗೆ ಆರೋಪಿಯ ಪರಿಚಯ ಇತ್ತಾ ಎಂದರೆ ಸಾಕ್ಷಿಯು ಆಗಸ್ಟ್- 2022 ರಲ್ಲಿ ಆರೋಪಿ ಗಿರೀಶನ ಮುಖಾಂತರ ಪರಿಚಯ ಆಗಿರುತ್ತಾರೆ. ನಾನು ಗಿರೀಶನಿಗೆ ಹಣ ಪಾವತಿ ಮಾಡಿರುವ ವಿಚಾರವನ್ನು ಆರೋಪಿಗೆ ಹೇಳಿರುತ್ತೇನೆ, ಆರೋಪಿ ಕೂಡ ಆಗ ಇದ್ದರು.

ನಾನು ಆರೋಪಿಯನ್ನು ನೋಡೇ ಇಲ್ಲ, ಆರೋಪಿಗೆ ಸೇರಿದ ಚೆಕ್ಕುಗಳನ್ನು ನಾನು ಬೇರೆಯವರಿಂದ ಪಡೆದುಕೊಂಡು, ನಾನು ಆರೋಪಿಯ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ದೂರನ್ನು ನಾನು ಗಿರೀಶನ ಮೇಲೆ ಮಾತ್ರ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ನಿಡಿ-1 ದೂರನ್ನು ಗಿರೀಶ ಮತ್ತು ಜಗದೀಶನ ವಿರುದ್ಧ ದಾಖಲಿಸಿರುತ್ತೇನೆ. ನಾನು ನಿಡಿ-1 ರಂತೆ ದೂರು ದಾಖಲಿಸಿದ ಮೇಲೆ ಪೊಲೀಸರು ಗಿರೀಶನನ್ನು ದಸ್ತಗಿರಿ ಮಾಡಿಕೊಂಡು ಬಂದು 2 ದಿನ ಲಾಕಪ್ ನಲ್ಲಿ ಇಟ್ಟಿದ್ದು, ಗಿರೀಶನನ್ನು ಬಿಡಿಸಿಕೊಳ್ಳಲು ಜಗದೀಶ ಬಂದಿರುತ್ತಾರೆ ಎಂದರೆ ಸರಿಯಲ್ಲ. ಆಗ

ಪೊಲೀಸರು ಜಗದೀಶ ಚೆಕ್ಕುಗಳನ್ನು ಕೊಟ್ಟರೆ ಮಾತ್ರ ಬಿಡುವುದಾಗಿ ಹೇಳಿದ್ದು, ಆಗ ಜಗದೀಶ ಅವನ ಮಗನ ಮುಖಾಂತರ 6 ಚೆಕ್ಕುಗಳನ್ನು ತರಿಸಿಕೊಂಡು ಪೊಲೀಸರಿಗೆ ಕೊಟ್ಟ ಮೇಲೆ ಪೊಲೀಸರು ಗಿರೀಶನನ್ನು ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಪಡೆದ ಚೆಕ್ಕುಗಳನ್ನು ನಾನು ಮತ್ತು ಗಿರೀಶ ಸೇರಿ ದುರುಪಯೋಗ ಪಡಿಸಿಕೊಂಡು ಆರೋಪಿಯ ವಿರುದ್ಧ ಈ ಪ್ರಕರಣಗಳನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ದಿಃ 27.02.2024 ರ ಹಿಂದೆ ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಚೆಕ್ಕಿನ ವ್ಯವಹಾರ ಆಗಿಲ್ಲ ಎಂದರೆ ಸರಿ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಆರೋಪಿಯ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಮಡಿಕೇರಿ.